**Code No. 10 X(C)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

ಜುಲೈ, 2015

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಯಾರಿಗೆ ಆತ್ಮವಿಶ್ವಾಸ ಇಲ್ಲವೋ ಅವನು ನಾಸ್ತಿಕ. ಹಳೆಯ ಧರ್ಮಗಳು ಯಾರಿಗೆ ದೇವರಲ್ಲಿ ಭಕ್ತಿ ಇಲ್ಲವೋ ಅವನನ್ನು ನಾಸ್ತಿಕನೆನ್ನುತ್ತಿದ್ದುವು. ನವೀನ ಧರ್ಮವು ಯಾರು ಆತ್ಮವಿಶ್ವಾಸ ಹೀನರೋ, ಅವರನ್ನು ನಾಸ್ತಿಕರೆಂದು ಸಾರುತ್ತದೆ. ಇಲ್ಲ ಸಾಧ್ಯವಿಲ್ಲ ಎಂದು ಎಂದೂ ಹೇಳಬೇಡಿ, ಏಕೆಂದರೆ ನಾವು ಅನಾದಿ, ಅಸಂತರು, ನಿಮ್ಮ ಸಹಜ ಸ್ವಭಾವದೊಂದಿಗೆ ಹೋಲಿಸಿದರೆ ಕಾಲದೇಶಗಳೂ ಗಣನೆಗೆ ಬರುವುದಿಲ್ಲ. ಏನನ್ನಾದರೂ, ಯಾವುದನ್ನಾದರೂ ನೀವು ಮಾಡಬಲ್ಲಿರಿ, ನೀವು ಸರ್ವಶಕ್ತರು, ನೀವೆಲ್ಲ ಭಗವಂತನ ಮಕ್ಕಳು. ಅಮೃತಾನಂದದಲ್ಲಿ ಭಾಗಿಗಳು ಪರಿಶುದ್ಧತ್ಮರು ನೀವು, ಪರಿಪೂರ್ಣರು ನೀವು ನೀವೆಲ್ಲರೂ ಜಗದ ಪವಿತ್ರಾತ್ಮರು. ಪಾಪಿಗಳು ಎಂದು ಮಾನವರನ್ನು ಕರೆಯುವುದೇ ಘೋರ ಪಾತಕ, ಮಾನವ ಸ್ವಭಾವಕ್ಕೆ ಬಗೆಯುವ ಮಹಾ ದ್ರೋಹ. ಸಿಂಹಗಳೇ ಬನ್ನಿ, ನೀವು ಕುರಿಗಳು ಎಂಬ ಭ್ರಾಂತಿಯನ್ನು ಕೂಡಹಿ, ಅಮೃತಾತ್ಮರು ನೀವು, ಮುಕ್ತಾತ್ಮರು ನೀವು, ಆನಂದಮಯರು ನೀವು ನಿತ್ಯಾತ್ಮರು ನೀವು.

ಯಾವುದಾದರೊಂದು ಪದವು ಉಪನಿಷತ್ತುಗಳ ಮಹಾಗಣಿದಯಿಂದ ಸಿಡಿಮದ್ದಿನಂತೆ ಹಾರುತ್ತಿದ್ದರೆ, ಸಿಡಿಮದ್ದಿನಂತೆ ಅಜ್ಞಾನಿಗಳ ಮೇಲೆ ಸಿಡಿಯುತ್ತಿದ್ದರೆ, ಅದೇ ಅಭೀಃ ಎಂಬ ಪದ. ಬೋಧಿಸಬೇಕಾದ ಒಂದೇ ಒಂದು ಧರ್ಮವೆಂದರೆ ಅಭೀಃ ಅಥವಾ ನಿರ್ಭೀತಿ ಎಂಬ ಧರ್ಮ. ನಾನು ಉಪನಿಷತ್ತುಗಳನ್ನು ಮಾತ್ರ ಬೋಧಿಸುತ್ತೇನೆ. ನೀವು ಪರೀಕ್ಷಿಸಿದರೆ ಉಪನಿಷತ್ತಲ್ಲದೆ ನಾನು ಬೇರೆನನ್ನೂ ಹೇಳಿಲ್ಲ ಎಂದು ಗೊತ್ತಾಗುವುದು. ಉಪನಿಷತ್ತುಗಳಲ್ಲಿಯೂ

[ Turn over

ಒಂದು ಭಾವನೆಯನ್ನು ಮಾತ್ರ ಬೋಧಿಸಿರುವನು, ಅದೇ ಬಲ, ವೇದ ವೇದಾಂತಗಳ ಸಾಲವೆಲ್ಲ ಆ ಒಂದು ಪದದಲ್ಲಿದೆ. ನನ್ನ ತರುವ ಸ್ನೇಹಿತರೇ, ಮೊದಲ ಬಲಿಷ್ಠರಾಗಿ. ಇದು ನನ್ನ ಬುದ್ಧಿವಾದ, ಗೀತಾಧ್ಯಯನಕ್ಕಿಂತ ಫುಟ್‌ಬಾಲ್ ಆಟದಿಂದ ಮುಕ್ತಿಗೆ ಹತ್ತಿರ ಹೋಗುವಿರಿ. ಇವು ಕೆಚ್ಚಿನ ಮಾತುಗಳು, ಆದರೂ ನಾನು ಇದನ್ನು ನಿಮಗೆ ಹೇಳಬೇಕಾಗಿದೆ. ನಾನು ನಿಮ್ಮನ್ನು ಪ್ರೀತಿಸುತ್ತೇನೆ. ನಿಮ್ಮ ನ್ಯೂನತೆ ನನಗೆ ಗೊತ್ತಿದೆ. ನನಗೆ ಸ್ವಲ್ಪ ಅನುಭವವಾಗಿದೆ, ನಿಮ್ಮ ಬಾಹುಗಳ ಮಾಂಸಖಂದಲ್ಲಿ ಸ್ವಲ್ಪ ಹೆಚ್ಚು ಶಕ್ತಿ ಇದ್ದರೆ, ನೀವು ಗೀತೆಯನ್ನು ಇನ್ನೂ ಚೆನ್ನಾಗಿ ತಿಳಿದುಕೊಳ್ಳಬಲ್ಲಿರಿ, ಪ್ರತಿಯೊಬ್ಬನನ್ನೂ ಈ ಒಂದು ಪ್ರಶ್ನೆಯನ್ನು ಕೇಳುತ್ತೇನೆ ನೀವು ಬಲಿಷ್ಠರಾಗಿರುವಿರಾ ಬಲಿಷ್ಠರೆಂದು ಭಾವಿಸುವಿರಾ ಸತ್ಯ ಮಾತ್ರ ಬಲವನ್ನು ನೀಡಬಲ್ಲದೆಂಬುದು ನನಗೆಗೊತ್ತಿದೆ. ಭವರೋಗಕ್ಕೆ ಔಷಧವೇ ಶಕ್ತಿ.

ಇದೊಂದು ದೊಡ್ಡ ಸತ್ಯ ಶಕ್ತಿಯೇ ಜೀವನ, ದುರ್ಬಲತೆಯೇ ಮರಣ, ಶಕ್ತಿಯೇ ಪರಮಾನಂದ, ಅಖಂಡಜೀವನ, ಅಮರತ್ವ, ದುರ್ಬಲತೆಯೇ ಅನವರತ ದುಃಖ, ತಳಮಳ, ದುರ್ಬಲತೆಯೇ ಮರಣ ಅಜ್ಞಾನಾಂಧಕಾರದಲ್ಲಿ ತೊಳಲುವುದಕ್ಕಿಂತ ಮೃತ್ಯುವು ಲೇಸು, ಸೋಲನ್ನು ಒಪ್ಪಿಕೊಂಡು ಬಾಳುವುದಕ್ಕಿಂತ ಸಮರದಲ್ಲಿ ಮಡಿಯುವುದು ಲೇಸು. ಬನ್ನಿ ಏನಾದರೂ ಒಂದು ಶೌರ್ಯದ ಕೆಲಸವನ್ನು ಮಾಡಿ, ಸಹೋದರನೆ, ನಿನಗೆ ಮುಕ್ತಿ ಸಿಕ್ಕದೇ ಇದ್ದರೆ ಏನು ಕೆಲವು ವೇಳೆ ನರಕಕ್ಕೆ ಇಳಿದರೇನಂತೆ ನಿರಾಶರಾಗಬೇಡಿ.